ಲಕ್ಷ ನಗದು ಕೊಟ್ಟರಾಯಿತು. ಆ ಮಾದೇವಿಗಷ್ಟು ಬಿಸಾಕಿ ಪೀಡೆ ಬಿಡಿಸಿಕೊಳ್ಳಬೇಕು. ಉಳಿದದ್ದು ತನ್ನ ಕಮಿಶನ್. ಉದ್ವೇಗದಲ್ಲಿ ನಿದ್ದೆ ಹತ್ತುವುದು ತಡವಾಯಿತು. ಬೆಳಿಗ್ಗೆ ಫೋನು ಮಾಡಿ ಜಗನ್ನಾಥನಿಗೆ ವಿಷಯ ತಿಳಿಸಿದರು.

★★★

ಅದಾಗಿ ಎಂಟುದಿನಕ್ಕೆ ಮತ್ತಿಬ್ಬರೊಂದಿಗೆ ಕಾಮತರ ಸ್ಕಾರ್ಪಿಯೊ ಹೆಗಡೆಯವರ ಮನೆಗೆ ಬಂತು. ಶಿರಸಿಯಲ್ಲಿ ವಕೀಲರ ಸಮಕ್ಷಮ ಒಪ್ಪಂದಪತ್ರ ತಯಾರಾಯಿತು. ಮುಂಬಯಿಗೆ ಫೋನುಮಾಡಿ ಒಂದುಕೋಟಿ ಹಣ ಜಗನ್ನಾಥನ ಖಾತೆಗೆ ಜಮೆಯಾಗಿ, ಪುರಾವೆ ಸಿಕ್ಕಿತು. ಆಫೀಸಿನಲ್ಲಿ ಸಮಯ ನಿಗದಿಪಡಿಸಿಕೊಂಡು ಕಾಗದಪತ್ರ ತಯಾರುಮಾಡಲು ಕೊಟ್ಟು, ಸ್ಕಾರ್ಪಿಯೊ ಮತ್ತೆ ಹೆಗಡೆಯವರ ಮನೆಗೆ ಬಂತು. ಹಿಂದಿನ ದಿನವೆ ಜಗನ್ನಾಥ ಫೋನುಮಾಡಿ ತುರ್ತು ಅಗತ್ಯವಿರುವುದಾಗಿಯೂ ಒಂದೂಕಾಲು ಕೋಟಿ ಪೂರ್ತಿ ಹಣ ತನ್ನ ಅಕೌಂಟಿಗೆ ಹಾಕಬೇಕೆಂದು ಕೇಳಿದ್ದ. ಹೆಗಡೆಯವರು ಆಗಿಂದ ತವಕಿಸುತ್ತಿದ್ದುದು ಅರ್ಥವಾದವರಂತೆ ಕಾಮತರು ಪಕ್ಕಕ್ಕೆ ಕರೆದು ಪಿಸುದನಿಯಲ್ಲಿ ಬ್ಯಾಂಕ್ ಅಕೌಂಟಿನಲ್ಲಿ ಇಪ್ಪತ್ತೈದು ಲಕ್ಷ ಕಮ್ಮಿ ಬಿದ್ದುದಕ್ಕೆ ಒಂದುಕೋಟಿಯಷ್ಟೆ ವರ್ಗಾಯಿಸಲಾಯಿತೆಂದೂ ಬಾಕಿ ಇಪ್ಪತ್ತೈದನ್ನೂ ನಗದು ಕೊಡುವುದಾಗಿಯೂ, ಅಭ್ಯಂತರವಿದ್ದರೆ ಬ್ಯಾಂಕಿಗೆ ವರ್ಗಾವಣೆ ಮಾಡಲು ನಾಲ್ಕುದಿನ ಗಡುವು ಕೊಡಬೇಕೆಂದು ಪ್ರಸ್ತಾಪವನ್ನಿಟ್ಟರು. ತೊಡಕೇನೂ ಕಾಣಲಿಲ್ಲ. ವ್ಯವಹಾರ ಮುಗಿದುಹೋಗಲಿ ಅಂತ ಖುಷಿಯಿಂದಲೆ ಒಪ್ಪಿದರು. ಮಧ್ಯಾಹ್ನ ಆಫೀಸಿಗೆ ಹೊರಡುವದಕ್ಕೆ ಮುಂಚೆ ಸ್ಕಾರ್ಪಿಯೊದಿಂದ ಎರಡು ಹಳೆ ಪ್ಲಾಸ್ಟಿಕ್ ಬಕೆಟ್ಟುಗಳನ್ನು ಅವರ ಕೈಯಲ್ಲಿಟ್ಟು ಇಪ್ಪತ್ತೈದೂ ಸೇರಿದೆ, ಚೆಕ್ ಮಾಡಿಕೊಂಡು ಒಳಗಿಟ್ಟುಕೊಳ್ಳಿ ಅಂದರು. ಮತ್ತಿನಮೇಲೆ ಒಯ್ದವರು ಖಾತ್ರಿಪಡಿಸಿಕೊಂಡು ಕೆಳಗಿಳಿದುಬಂದು ಸ್ಕಾರ್ಪಿಯೊ ಹತ್ತಿದರು.

ತೋಟ ಮತ್ತು ಬಂಗಾರದಮೇಲೆ ತೆಗೆದ ಸಾಲ ಮರುದಿನ ಖಾತೆಗೆ ಬಂತು. ಜಗನ್ನಾಥ ಅರ್ಜೆಂಟಿದೆ ಅಂದಿದ್ದಕ್ಕೆ ಎಲ್ಲಾ ಒಂದೇ ಅಂತ ಅದರಿಂದಲೆ ಇಪ್ಪತ್ತೈದು ಲಕ್ಷ ಜಗನ್ನಾಥನ ಖಾತೆಗೆ ವರ್ಗಾಯಿಸಿ ಫೋನು ಮಾಡಿ ತಿಳಿಸಿದರು. ಒಂದು ಕೋಟಿಯ ಭಾಗ್ಯವನ್ನು ಅದೃಷ್ಟ ಅಗತ್ಯವಿದ್ದಾಗಲೇ ಕರುಣಿಸಿತ್ತು. ಮಗನಿಗೆ ತಕ್ಷಣ ನಲವತ್ತು ನಗದು ಕೊಟ್ಟು ಕೈತೊಳೆದುಕೊಂಡರೆ ಒಂದು ಹಂತಕ್ಕೆ ಬಂದಂತೆ ಅಂತ ಶನಿವಾರ ಬೆಂಗಳೂರಿಗೆ ಟಿಕೆಟ್ ಕಾದಿರಿಸಿರು.

ಎರಡು ದಿನವಾಗಿತ್ತು. ರಾತ್ರಿ ಸೀರಿಯಲ್ ನಡುವೆ ಚಾನೆಲ್ ಬದಲಿಸುತ್ತಾ ಕುಳಿತಿದ್ದ ಹೆಂಡತಿ ಆತುರದಿಂದ ಕರೆದಾಗ, 'ಏನೇ ನಿಂದೀಗಾ?...' ಅಂತ ಅಲವತ್ತುಕೊಳ್ಳುತ್ತಾ ಬಂದವರಿಗೆ ಸ್ಕ್ರೀನಿನ ತುಂಬಾ ಐದುನೂರರ, ಸಾವಿರದ ಕರೆನ್ಸಿ ನೋಟುಗಳ ಸುದ್ದಿಯೇ ತುಳುಕುತ್ತಿದ್ದುದು ಕಾಣಿಸಿತು. ಟೀವೀಗೇ ಡಿಕ್ಕಿ ಹೊಡೆಯುವಂತೆ ಹೋಗಿ ನಿಂತವರಿಗೆ ಅದು ಒಳಗಿಳಿಯಲು ಐದು ನಿಮಿಷ ಹಿಡಿಯಿತು. ಈಗಿದೆಂತಾ ಗೋಟಾಳೆ ಬಂತಪ್ಪಾ ಅಂತ ಮತ್ತಿಗೆ ಓಡಿ ಕುಮಟೆಯ ಬ್ಯಾಂಕಿನಲ್ಲಿ ಕೆಲಸ ಮಾಡುವ ಮಾಸ್ತರ ಮಗನಿಗೆ ಫೋನು ಮಾಡಿದರು. ಎರಡೂವರೆ ಲಕ್ಷದ ವರೆಗೆ ಜಮಾ ಮಾಡುವುದು, ಕೃಷಿ ಉತ್ಪನ್ನ ಅಂತೆಲ್ಲ ನೂರು ವಿವರ ಕೇಳಿ ತಲೆ ಖಾಲಿ ಚೊಂಬಾಯಿತು. ಹೆಂಡತಿಯ ಪ್ರಶ್ನೆಗಳು ಅರ್ಥವಾಗಲೆ ಇಲ್ಲ. ಅಸಲು ವಿಷಯ ಹೆಂಡತಿಯೇನು ಯಾರೊಂದಿಗು ಹಂಚಿಕೊಳ್ಳುವಂತೇ ಇಲ್ಲ.

ಬೆಳಿಗ್ಗೆಯೇ ಶಿರಸಿಗೋಡಿದರು. ಎಲ್ಲಾ ಬ್ಯಾಂಕು, ಎಲ್ಲಾ ಎಟಿಎಂ ಎದುರು ಜನ, ಗದ್ದಲ. ಹೇಗೋ ನುಗ್ಗಿ ಗುರುತಿನ ಮೇನೇಜರನ್ನು ಕಂಡರು. ಪಾಸ್‌ಬುಕ್ಕು ನೋಡಿ 'ಸಾಲದ ಹಣ